## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಇಂಡಿ.

**OS No**.375/2016

**DW**:1

**ದಿನಾಂಕ 24.06.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ.ಎ.ಎ.ಜಿ. ವಕೀಲರಿಂದ:**

ಸಾಲೋಟಗಿಯಲ್ಲಿ ನನ್ನ ಹೆಸರಿನಲ್ಲಿ 2 ಮನೆಗಳು ಇದ್ದು ಅವುಗಳನ್ನು ನಾನು ಮತ್ತು ನನ್ನ ಸಹೋದರ ಸಹೋದರಿಯರು ಖರೀದಿ ಮಾಡಿರುತ್ತೇವೆ. ನಾವು ಎಲ್ಲರೂ ಕೂಡಿ ಇರುವುದಿಲ್ಲ ಬೇರೆ ಬೇರೆ ಇರುತ್ತೇವೆ. ನನ್ನ ಹೆಸರಿನಲ್ಲಿ ಬೇರೆ ಜಮೀನುಗಳು ಮತ್ತು ನಮ್ಮ ಅಣ್ಣನ ಹೆಸರಿನಲ್ಲಿ ಬೇರೆ ಜಮೀನುಗಳು ಇರುತ್ತವೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.2(ಬಿ) ರವರು ಲಿಖಿತ ಹೇಳಿಕೆಯಲ್ಲಿ ಏನು ಬರೆಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಪ್ರತಿವಾದಿ ನಂ.2(ಬಿ) ರವರು ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ನನಗೆ ಓದಿ ಹೇಳಿಲ್ಲ. ಪ್ರತಿವಾದಿ ನಂ.2(ಬಿ) ರವರ ಮಾತು ಕೇಳಿ ವಾದಿಯರಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

2 ನೇ ವಾದಿಯ ಜೊತೆ ನನ್ನ ಮದುವೆಯು ಶಿವಯೋಗೆಪ್ಪ ದೇವಸ್ಥಾನದಲ್ಲಿ ಆಗಿದ್ದು ಆದರೆ ನನಗೆ ದಿನಾಂಕ ಗೊತ್ತಿಲ್ಲ. 2 ನೇ ವಾದಿಗೆ ವಿಚ್ಛೇದನವನ್ನು ನೀಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು 2 ನೇ ವಾದಿ 2 ನೇ ಹೆಂಡತಿ ಇರುತ್ತಾಳೆ ಎಂದು ನುಡಿಯುತ್ತಾರೆ. 2 ನೇ ವಾದಿಯು ಮೊದಲನೇ ಹೆಂಡತಿ ಇದ್ದು ಪಾರ್ವತಿಯು 2 ನೇ ಹೆಂಡತಿ ಇರುತ್ತಾಳೆ ಎಂದರೆ ಸರಿಯಲ್ಲ. ಪಾರ್ವತಿಯು 2 ನೇ ಹೆಂಡತಿಯು ಇರುವ ಕಾರಣ ಆಕೆಗೆ ಮತ್ತು ಆಕೆಯ ಮಕ್ಕಳಿಗೆ ದಾವಾ ಆಸ್ತಿಯಲ್ಲಿ ಪಾಲು ಇರುವುದಿಲ್ಲ ಎಂದರೆ ಸರಿಯಲ್ಲ. ಪಾರ್ವತಿ ಇವರು ನನ್ನ ಮೊದಲನೇ ಹೆಂಡತಿ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ಜಯಶ್ರೀ ಮತ್ತು ಶಿವಾನಂದ ಇವರು ನನ್ನ ಕಾನೂನುಬದ್ಧ ಮಕ್ಕಳು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ನ್ಯಾಯಾಲಯಕ್ಕೆ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವ ಬಗ್ಗೆ ನನಗೆ ಗೊತ್ತಿಲ್ಲ.



ನಾನು ವಾಚಮೆನ್ ಕೆಲಸವನ್ನು ಭತಗುಣಕಿಯಲ್ಲಿ ಮಾಡುತ್ತೇನೆ. ನಾನು ವಾದಿಯರಿಗೆ ಪಾಲು ಕೊಡಬೇಕಾಗುತ್ತದೆ ಎನ್ನುವ ದುರುದ್ದೇಶದಿಂದ ಖೊಟ್ಟಿ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾನಪತ್ರ ಯಾವಾಗ ಮತ್ತು ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ನೆನಪಿಲ್ಲ. ನಾವು

ದಾವೆ ನಡೆಯುತ್ತಿರುವಾಗ ಖೊಟ್ಟಿ ದಾನಪತ್ರವನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಯರ ಉಪಜೀವನಕ್ಕೆ ನಾನು ಏನು ಕೊಟ್ಟಿರುವುದಿಲ್ಲ ಮತ್ತು ಅವರಿಗೆ 1/3 ನೇ ಭಾಗಾಂಶ ಇರುತ್ತದೆ ಎಂದರೆ ಸಾಕ್ಷಿಯು ಈಗಾಗಲೇ 6 ಪಾಲು ಆಗಿರುತ್ತದೆ ಎಂದು ನುಡಿಯುತ್ತಾರೆ.

2017 ನೇ ಇಸವಿಯಲ್ಲಿ ಮಾಡಿರುವ ಮೃತ್ಯು ಪತ್ರವು ಖೊಟ್ಟಿ ಇರುತ್ತದೆ ಎಂದರೆ ಸರಿಯಲ್ಲ. ಶಿವಾನಂದ ಮತ್ತು ಜಯಶ್ರೀ ಇವರು 2 ನೇ ಹೆಂಡತಿಯ ಮಕ್ಕಳು ಇರುವ ಕಾರಣ ಅವರಿಗೆ ದಾವಾ ಆಸ್ತಿಯಲ್ಲಿ ಪಾಲು ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ. ಸರಿ ಇದೆ.

ಸಹಿ/-

ಜೆ.ಎಂ.ಎಫ್.ಸಿ. ನ್ಯಾಯಾಲಯ

ಇಂಡಿ.